# ಸೈಕಲ್‌ಪ್ರಿಯ ಬ್ರೆಜಿಲ್ ಜೋಡಿ!




ಬ್ರೆಜಿಲ್‌ನಿಂದ ಬಂದ ಟಿಯಾಗೊ ಹಾಗೂ ಶೆಲೆನಾ

ಕಾರಿನ ಬಲಭಾಗದಲ್ಲಿ ಚಾಲಕನ ಆಸನ, ಎಲ್ಲೆಂದರಲ್ಲಿ ವಾಹನ ಪಾರ್ಕಿಂಗ್, ಕರ್ಕಶವಾಗಿ ಶಬ್ದ ಮಾಡುತ್ತ ಓಡಾಡುವ ಬೈಕ್‌ಗಳು, ಅನಗತ್ಯವಾಗಿ ಹಾರ್ನ್ ಹಾಕುವ ವಾಹನಗಳು, ಸಿಗ್ನಲ್ ದೀಪಗಳ ಕೊರತೆ, ಮಾರ್ಗಸೂಚಿ ಫಲಕಗಳಿಲ್ಲದಿರುವುದು.. ಇಲ್ಲಿನ ಸಂಚಾರ ವ್ಯವಸ್ಥೆ ಕಂಡು ಬೆಚ್ಚಿದ್ದಾರೆ ಬ್ರೆಜಿಲ್‌ನ ಈ ಜೋಡಿ. 'ನಮ್ಮಲ್ಲಿ ಅನವಶ್ಯಕವಾಗಿ ಹಾರ್ನ್ ಹಾಕಿದರೆ ದಂಡ ತೆರಬೇಕು' ಎಂದು ನಗುತ್ತಲೇ ಹೇಳಿದ ಟಿಯಾಗೊ ಹಾಗೂ ಶೆಲೆನಾ ಅವರಿಗೆ ಇಲ್ಲಿಗೆ ಬಂದ ಹೊಸದರಲ್ಲಿ ರಸ್ತೆಯಲ್ಲಿ ಸಂಚರಿಸಲು ಭಯವಾಗುತ್ತಿತ್ತಂತೆ.

ಇಲ್ಲಿನ ರಸ್ತೆ ನಿಯಮಗಳ ಅರಿವಿರದಿದ್ದ ಅವರಿಗೆ ಎಡಗಡೆ ಚಲಿಸಬೇಕೊ, ಬಲಭಾಗದಲ್ಲಿ ಚಲಿಸಬೇಕೊ ಎಂಬ ಗೊಂದಲ ಉಂಟಾಗಿತ್ತು. ಒಮ್ಮೆ ರಸ್ತೆಯಲ್ಲಿ ನಡೆದು ಹೋಗುವಾಗ ಕಾರೊಂದು ಹಾರ್ನ್ ಹಾಕುತ್ತ ಮುಂದೆ ಸಾಗಿತು. ಆಗ ಏನೋ ತುರ್ತು ಇರಬೇಕು ಎಂದು ಮುಂದೆ ಸಾಗಿದರು. ಬಳಿಕ ರಸ್ತೆಯಲ್ಲಿ ಓಡಾಡುವ ಎಲ್ಲ ವಾಹನಗಳು ಅಗತ್ಯವಿಲ್ಲದಿದ್ದರೂ ಹಾರ್ನ್ ಹಾಕುತ್ತಿದ್ದವು. ಇದನ್ನು ಕಂಡು ಆಚ್ಚರಿಗೆ ಒಳಗಾಗಿದ್ದ ಈ ಜೋಡಿ, ಹಾರ್ನ್ ಹಾಕಿದರೂ ಇಲ್ಲಿ ದಂಡ ವಿಧಿಸುವುದಿಲ್ಲ ಎಂದು ನಿಧಾನಕ್ಕೆ ಅರಿತುಕೊಂಡರಂತೆ. 'ನಮ್ಮಲ್ಲಿ ತುರ್ತು ಸಂದರ್ಭದಲ್ಲಿ ಮಾತ್ರ ಹಾರ್ನ್ ಹಾಕಬೇಕು. ರೋಗಿಗಳನ್ನು ಹೊತ್ತೊಯ್ಯುವ ಆಂಬುಲೆನ್ಸ್‌ಗಳು ಹಾರ್ನ್ ಮಾಡಬಹುದು. ಸಾಮಾನ್ಯ ಜನರು ಹಾರ್ನ್ ಮಾಡುತ್ತೇವೆ ಎಂದರೆ ಅದಕ್ಕೆ ನಿರ್ದಿಷ್ಟ ಕಾರಣ ಇರಬೇಕು. ಇಲ್ಲದಿದ್ದರೆ ದಂಡ ತೆರಬೇಕು' ಎಂದು ಅಲ್ಲಿನ ಸಂಚಾರ ನಿಯಮವನ್ನು ವಿವರಿಸಿದರು ಶೆಲೆನಾ.

ಸೈಕಲ್‌ನಲ್ಲಿ ಓಡಾಡುವುದೆಂದರೆ ಟಿಯಾಗೊ ಅವರಿಗೆ ಅಚ್ಚುಮೆಚ್ಚು. ಮೈಸೂರಿನಲ್ಲಿ ಅದರ ಅನುಭವ ಪಡೆಯಲೆಂದು ಬಯಸಿ ಬಾಡಿಗೆ ಪಡೆದು ಸೈಕಲ್ ಏರಿ ರಸ್ತೆಗಿಳಿದರು. ಬ್ರೆಜಿಲ್‌ನ ರಸ್ತೆ ನಿಯಮದಂತೆ ಬಲಭಾಗದಲ್ಲಿ ಚಲಿಸುತ್ತಾ ಹೋದರು. ಮುಖ್ಯರಸ್ತೆಗೆ ಬಂದೊಡನೆ ಎಲ್ಲ ವಾಹನಗಳು ಅವರ ಎದುರಿಗೆ ಬರುವುದನ್ನು ಕಂಡು ಅಚ್ಚರಿಪಟ್ಟರು. ಎಲ್ಲ ವಾಹನಗಳೂ ಏಕೆ ತಪ್ಪು ದಾರಿಯಲ್ಲಿ ಬರುತ್ತಿವೆ ಎಂದುಕೊಂಡು ಮುಂದೆ ಸಾಗುತ್ತಿದ್ದರು. ಆಗ ಟ್ರಾಫಿಕ್ ಪೊಲೀಸ್ ಅವರನ್ನು ನಿಲ್ಲಿಸಿ ಪ್ರಶ್ನಿಸಿದರಂತೆ. ಆಗಲೇ ಅವರಿಗೆ ಗೊತ್ತಾಗಿದ್ದು 'ನಾನೇ ತಪ್ಪು ದಾರಿಯಲ್ಲಿ ಹೋಗುತ್ತಿದ್ದೆ ಎಂದು' ಎನ್ನುತ್ತ ತಾವು ಪೇಚಿಗೆ ಸಿಲುಕಿದ ಪ್ರಸಂಗವನ್ನು ಬಿಚ್ಚಿಟ್ಟರು ಟಿಯಾಗೊ.

ಪ್ರವಾಸಕ್ಕಾಗಿ ಭಾರತಕ್ಕೆ ಬರುವ ವಿದೇಶಿಗರು ಯೋಗದತ್ತಲೂ ಚಿತ್ತ ಹರಿಸುತ್ತಿದ್ದಾರೆ. ಹೀಗಾಗಿ, ಯೋಗವೂ ಪ್ರವಾಸೋದ್ಯಮದ ಒಂದು ಭಾಗವಾಗಿ ಬೆಳೆದಿದೆ. ಮೂರು ತಿಂಗಳ ಭಾರತ ಪ್ರವಾಸ ಯೋಜನೆ ರೂಪಿಸಿಕೊಂಡು ಬಂದಿರುವ ಈ ಜೋಡಿ, ಒಂದು ತಿಂಗಳು ಯೋಗ ಕಲಿಕೆಗಾಗಿ ಮೀಸಲಿಟ್ಟಿದೆ. ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಪಾತಂಜಲ ಅಷ್ಟಾಂಗ ವಿನ್ಯಾಸ ಯೋಗ ಶಾಲೆಯಲ್ಲಿ ವಿ.ಶೇಷಾದ್ರಿ ಹಾಗೂ ಎಸ್.ಹರೀಶ್ ಅವರ ಬಳಿ 15 ದಿನಗಳಿಂದ ಯೋಗ ಕಲಿಕೆಯಲ್ಲಿ ನಿರತರಾಗಿದ್ದಾರೆ.

ಪ್ರವಾಸಿಗರ ಗೈಡ್ ಆಗಿ ಕೆಲಸ ಮಾಡುತ್ತಿರುವ ಟಿಯಾಗೊ ಹಾಗೂ ಯೋಗ ಶಿಕ್ಷಕಿಯಾಗಿರುವ ಶೆಲೆನಾ 2 ವರ್ಷಗಳಿಂದ ಒಟ್ಟಿಗೆ ವಾಸ ಮಾಡುತ್ತಿದ್ದಾರೆ (ಲಿವಿಂಗ್ ಟುಗೆದರ್). 'ಮುಂದೆ ಮದುವೆಯಾಗಬೇಕು ಎಂಬ ಆಲೋಚನೆಯಲ್ಲಿದ್ದೇವೆ' ಎಂದು ನಸು ನಗುತ್ತಾರೆ ಶೆಲೆನಾ.

'ಗೋವಾ, ರಾಜಸ್ತಾನ, ಹೃಷಿಕೇಶ, ದೆಹಲಿ, ಆಗ್ರಾ ಮೊದಲಾದ ಸ್ಥಳಗಳನ್ನು ಸುತ್ತುವ ಜತೆಗೆ ಇಲ್ಲಿನ ಸಂಸ್ಕೃತಿಯನ್ನು ಅರಿಯಬೇಕು ಎಂದು ಇಲ್ಲಿಗೆ ಬಂದಿದ್ದೇವೆ. ಇಲ್ಲಿನ ಪೂಜಾ ಕ್ರಮ ಬಹಳ ಇಷ್ಟವಾಯಿತು. ನಮ್ಮಲ್ಲಿ ಇಲ್ಲಿಯ ರೀತಿ ದೇವಾಲಯಗಳಿಲ್ಲ. ಚರ್ಚ್‌ಗಳು ಮಾತ್ರ ಇವೆ. ಆದರೆ ಇಲ್ಲಿ ದೇವಾಲಯಗಳು, ಮಸೀದಿ, ಚರ್ಚ್ ಎಲ್ಲ ಇವೆ. ಮೊದಮೊದಲು ಅಚ್ಚರಿಯಾಗಿತ್ತು. ಇಲ್ಲಿನ ಸಂಸ್ಕೃತಿಯ ಬಗ್ಗೆ ಕೊಂಚ ಅಧ್ಯಯನ ಮಾಡಿದಾಗ ಧಾರ್ಮಿಕ ನಂಬಿಕೆ ಅರಿವಿಗೆ ಬಂದಿತು' ಎಂದರು ಶೆಲೆನಾ.

ಮೊದಲು ಭಾರತಕ್ಕೆ ಬಂದಾಗ ಇಲ್ಲಿನ ಸಮಯದ ಹೊಂದಾಣಿಕೆಗೆ ಬಹಳ ಕಷ್ಟಪಟ್ಟಿದ್ದಾರೆ. ಸುಮಾರು 8 ಗಂಟೆಗಳ ವ್ಯತ್ಯಾಸ ಇದ್ದುದರಿಂದ ಈ ಅನುಭವವಾಯಿತು. ಈಗ ಇಲ್ಲಿನ ಸಮಯಕ್ಕೆ ಹೊಂದಿಕೊಂಡಿದ್ದಾರೆ. ವಿದೇಶಿಗರೆಂದರೆ ಭಾರತೀಯರಿಗೂ ಕುತೂಹಲ ಇದ್ದೇ ಇರುತ್ತದೆ. ದಾರಿಯಲ್ಲಿ ಈ ಜೋಡಿ ನಡೆದು ಹೋಗುವಾಗ ಕೆಲವರು 'ಎಲ್ಲಿಂದ ಬಂದಿದ್ದೀರಿ, ಯಾವ ದೇಶ' ಎಂದು ಆತ್ಮೀಯವಾಗಿ ಮಾತನಾಡಿಸಿದರಂತೆ. ಅಪರಿಚಿತ ವ್ಯಕ್ತಿಗಳನ್ನೂ ಪ್ರೀತಿಯಿಂದ ಮಾತನಾಡಿಸುವುದನ್ನು ಕಂಡು ಪುಳಕಗೊಂಡಿದ್ದಾರೆ.

'ನಮ್ಮಲ್ಲೂ ಸ್ನೇಹ, ವಿಶ್ವಾಸದಿಂದ ಜನ ಮಾತನಾಡಿಸುತ್ತಾರೆ. ಆದರೆ, ಪರಿಚಯ ಇದ್ದರೆ ಮಾತ್ರ ಮಾತು. ಇಲ್ಲದಿದ್ದರೆ ಕತ್ತೆತ್ತಿಯೂ ನೋಡುವುದಿಲ್ಲ. ಆದರೆ, ಇಲ್ಲಿ ಹಾಗಿಲ್ಲ. ಮೊನ್ನೆ ದೇವರಾಜ ಮಾರುಕಟ್ಟೆಗೆ ತರಕಾರಿ ತರಲು ಹೋದಾಗ ಬಾಲಕನೊಬ್ಬ ನಮ್ಮನ್ನು ಆತ್ಮೀಯವಾಗಿ ಮಾತನಾಡಿಸಿದ. 'ಯಾವ ತರಕಾರಿ ಬೇಕು, ಯಾವ ದೇಶದವರು, ಎಷ್ಟು ದಿನವಾಯಿತು ಬಂದು' ಎಂದು ಮುದ್ದಾದ ಇಂಗ್ಲಿಷ್ ಭಾಷೆಯಲ್ಲಿ ನಮ್ಮನ್ನು ವಿಚಾರಿಸಿದ' ಎಂದು ಖುಷಿ ಪಡುತ್ತಾರೆ ಟಿಯಾಗೊ.

ಹೆಣ್ಣುಮಕ್ಕಳು ಹಣೆಗೆ ಬಿಂದಿ, ಕಿವಿಗೆ ಓಲೆ, ಕಾಲಿಗೆ ಗೆಜ್ಜೆ, ಕೈಗೆ ಬಳೆ, ಸೀರೆ ಉಡುವುದನ್ನು ಕಂಡು ಬೆರಗುಗೊಂಡಿದ್ದಾರೆ ಶೆಲೆನಾ. ಇವರಿಗೆ ಅವೆಲ್ಲಾ 'ಫ್ಯಾನ್ಸಿ'ಯಾಗಿ ಕಂಡಿವೆ. ಟ್ರಕ್ಕಿಂಗ್ ಇಬ್ಬರ ನೆಚ್ಚಿನ ಹವ್ಯಾಸ. ಬಿಡುವಿನ ಸಮಯ ಸಿಕ್ಕಾಗಲೆಲ್ಲ ಟ್ರಕ್ಕಿಂಗ್‌ಗೆ ಹೊರಟು ನಿಲ್ಲುತ್ತಾರೆ. ಮೈಸೂರಿನ ಚಾಮುಂಡಿ ಬೆಟ್ಟದ ಮೆಟ್ಟಿಲು ಹತ್ತಿ ಇಳಿಯುವಾಗಿನ ಸಮಯ 'ಆಹ್ಲಾದಕರವಾಗಿತ್ತು' ಎಂದು ಬಣ್ಣಿಸುತ್ತಾರೆ.

■ ಸುಮಾ ಬಿ.